GATWU Garment and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್
(Affiliated to New Trade Union Initiative - NTUI)

ದಿನಾಂಕ: 10.01.2009

ಶ್ರೀಮತಿ ಅನಿತಾ ಕುಮಾರಸ್ವಾಮಿಯವರಿಗೆ,
ಮಾನ್ಯ ಶಾಸಕರು,
ಮಧುಗಿರಿ ಕ್ಷೇತ್ರ.

ಮಾನ್ಯರೇ,

ಮೊದಲಿಗೆ, ಮಧುಗಿರಿ ಕ್ಷೇತ್ರದಿಂದ ಮಹಿಳಾ ಶಾಸಕರಾಗಿ ಆರಿಸಿ ಬಂದಿರುವ ತಮಗೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್‌ನಿಂದ ಗಾರ್ಮೆಂಟ್ಸ್ ಕಾರ್ಮಿಕರೆಲ್ಲರ ಪರವಾಗಿ ಅಭಿನಂದನೆಗಳು.

ಮೊಟ್ಟ ಮೊದಲಬಾರಿಗೆ ಜನತಾದಳ (ಜಾತ್ಯಾತೀತ) ಪಕ್ಷವು, ಗಾರ್ಮೆಂಟ್ಸ್ ಕಾರ್ಮಿಕರನ್ನು ಗುರುತಿಸಿ, ತನ್ನ 2008 ರ ಚುನಾವಣಾ ಪ್ರಣಾಳಿಕೆಯಲ್ಲಿ, ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಟ ವೇತನ 5000 ರೂ. ನಿಗದಿಪಡಿಸುತ್ತೇವೆ ಎಂದು ಘೋಷಿಸಿತ್ತು. ಸಮಸ್ತ ಗಾರ್ಮೆಂಟ್ಸ್ ಕಾರ್ಮಿಕರ ಪರವಾಗಿ ಪಕ್ಷಕ್ಕೂ ಸಹ ವಂದನೆಗಳನ್ನು ತಿಳಿಸುತ್ತಿದ್ದೇವೆ.

ಗಾರ್ಮೆಂಟ್ಸ್ ಉದ್ಯಮದಲ್ಲಿ 3.52 ಲಕ್ಷ ಕಾರ್ಮಿಕರು ದುಡಿಯುತ್ತಿದ್ದು, ಇವರಲ್ಲಿ 85 ಶೇಕಡಾ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಕಾರ್ಮಿಕರೆಲ್ಲರೂ ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ತುಮಕೂರು, ಕೋಲಾರ, ಜಿಲ್ಲೆಗಳಿಂದ ಪ್ರತಿನಿತ್ಯ ಕೆಲಸಕ್ಕೆ ಬಂದು ಹೋಗಿ ಮಾಡುತ್ತಿದ್ದಾರೆ. ಇದಲ್ಲದೆ, ದೂರದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲದೆ, ಹಾಸನ ಚಿಕ್ಕಮಗಳೂರು, ಚಾಮರಾಜನಗರ, ಮೈಸೂರು ಜಿಲ್ಲೆಗಳಿಂದ ಬೆಂಗಳೂರಿಗೆ ವಲಸೆ ಬಂದು ಈ ಕಾರ್ಮಿಕರು ದುಡಿಯುತ್ತಿದ್ದಾರೆ.

ಪ್ರಸ್ತುತ, ಈ ಉದ್ಯಮಕ್ಕೆ ನಿಗದಿಯಾಗಿರುವ ಕನಿಷ್ಟ ವೇತನದ ಬಗ್ಗೆ ಕೆಲವು ಮಾಹಿತಿಗಳನ್ನು ನಿಮಗೆ ನೀಡುತ್ತಿದ್ದೇವೆ. ಮತ್ತು ತಾವು ಈ ಬಗ್ಗೆ, ವಿಧಾನ ಸಭೆಯ ಅಧಿವೇಶನದಲ್ಲಿ ನಮ್ಮ ಪರವಾಗಿ ದನಿಯೆತ್ತಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

- ಕರ್ನಾಟಕ ಸರ್ಕಾರವು, ಗಾರ್ಮೆಂಟ್ಸ್ ಕಾರ್ಮಿಕರಿಗೆ ನಿಗದಿ ಪಡಿಸಿರುವ ಕನಿಷ್ಟ ವೇತನವು ದೇಶದಲ್ಲಿಯೇ ಅತಿ ಕಡಿಮೆ ಕನಿಷ್ಟ ವೇತನವಾಗಿದೆ. ದಿನಕ್ಕೆ 101.70 (ಮೂಲವೇತನ 71.70 + ಡಿ.ಎ 30.00) ರೂ. ಆಗಿದೆ.

- ಕನಿಷ್ಟ ವೇತನ ಕಾಯಿದೆಯ ಪ್ರಕಾರ ಪ್ರತಿ 3 ರಿಂದ 5 ವರ್ಷಕ್ಕೊಮ್ಮೆ ಕನಿಷ್ಟ ವೇತನವನ್ನು ಪರಿಷ್ಕರಿಸಬೇಕು.

GATWU: Regd. Office : No. 27, 5th Main, 6th Cross, Sampangiram Nagar, Bangalore - 560 027
E-mail : gatwu@rediffmail.com Mob: 98450 19056
NTUI: B-137, 1st Floor, Dayanand Colony, Lajpatnagar – IV, New Delhi – 110 024, Ph: 011-26486931

GATWU Garment and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್
*(Affiliated to New Trade Union Initiative - NTUI)*

- ಪ್ರಸ್ತುತ ಗಾರ್ಮೆಂಟ್ಸ್ ಕಾರ್ಮಿಕರು ಪಡೆಯುತ್ತಿರುವ ರೂ. 101.70 ರ ಕನಿಷ್ಟ ವೇತನವನ್ನು 2001 ಮೇ ನಲ್ಲಿ ಪರಿಷ್ಕರಿಸಿದ್ದು, 8 ವರ್ಷಗಳಾದರೂ ಇದೇ ವೇತನ ಮುಂದುವರೆದಿದೆ.

- ಈ ಕನಿಷ್ಟ ವೇತನವನ್ನು ಪರಿಷ್ಕರಿಸುವಂತೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್, 2007 ರಲ್ಲಿ ಶ್ರೀ ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು.

- ಅಲ್ಲದೆ, 2008 ರ ಆಗಸ್ಟ್ ತಿಂಗಳಲ್ಲಿ ಶ್ರೀ ಯಡಿಯೂರಪ್ಪನವರ ನೇತೃತ್ವದ ಸರ್ಕಾರಕ್ಕೆ ಇದೇ ವಿಷಯವಾಗಿ ಮನವಿಯನ್ನು ಸಲ್ಲಿಸಲಾಗಿದೆ.

ಇತ್ತೀಚಿನ ಅಗತ್ಯ ವಸ್ತುಗಳ ಬೆಲೆಯೇರಿಕೆಯ ಕಾರಣದಿಂದಾಗಿ, ಗಾರ್ಮೆಂಟ್ಸ್ ಕಾರ್ಮಿಕರ ಜೀವನವು ದುಸ್ತರವಾಗಿದೆ. ತಿಂಗಳಿಗೆ ಕೇವಲ 2600 ರೂ. ಗಳ ವೇತನದಿಂದ ಬೆಂಗಳೂರಿನಲ್ಲಿ ಕನಿಷ್ಟ ಮಟ್ಟದ ಜೀವನವನ್ನೂ ಸಾಗಿಸಲಾಗದೆ ಈ ಕಾರ್ಮಿಕರು ತತ್ತರಿಸುತ್ತಿದ್ದಾರೆ.

ಈ ಕಾರ್ಮಿಕರ ವೇತನವನ್ನು ಹೆಚ್ಚಿಸುವುದಕ್ಕೆ ಕೂಡಲೇ ಕ್ರಮವನ್ನು ಕೈಗೊಳ್ಳುವುದು ಬಹಳ ಮುಖ್ಯವಾಗಿದೆ.

ವಿರೋಧ ಪಕ್ಷದ ಮಹಿಳಾ ಶಾಸಕರಾಗಿ ಆಯ್ಕೆಯಾಗಿರುವ ತಾವು, ಈ ಬಾರಿಯ ವಿಧಾನಸಭೆಯ ಅಧಿವೇಶನದಲ್ಲಿ, ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಪರವಾಗಿ ಧ್ವನಿಯೆತ್ತಬೇಕೆಂದು, ಹಾಗೂ ಅವರ ವೇತನವನ್ನು ತಕ್ಷಣವೇ ಹೆಚ್ಚಿಸುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

ವಂದನೆಗಳೊಂದಿಗೆ,

| | | |
|---|---|---|
| [signature] | [signature] | ರುಕ್ಮಿಣಿ V.P |
| ರಾಣಿ | ಜಯರಾಮ್ ಕೆ.ಆರ್ | ರುಕ್ಮಿಣಿ |
| ಉಪಾಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ |

ಜ್ಞಾಪನಾ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ.

GATWU: Regd. Office : No. 27, 5th Main, 6th Cross, Sampangiram Nagar, Bangalore - 560 027
E-mail : gatwu@rediffmail.com Mob: 9845019056
NTUI: B-137, 1st Floor, Dayanand Colony, Lajpatnagar – IV, New Delhi – 110 024, Ph: 011-26486931